ಒ ಎಸ್ ನಂ. 32/21.
DW-1

ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ **12.06.2024**

ಪಾಟೀ ಸವಾಲುಃ ಶ್ರೀ ಸಿ ಎಸ್ ಪಿ ವಕೀಲರಿಂದ

ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಪ್ರತಿವಾದ ಪತ್ರಕ್ಕೂ ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೂ ಒಂದಕ್ಕೊಂದು ಸೌಮ್ಯತೆ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದಲ್ಲಿ ಇಲ್ಲದೆ ಇರುವ ವಿಚಾರಗಳನ್ನು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಯಲಾಗಿದೆ ಎಂದರೆ ಸರಿಯಲ್ಲ. ದಾವಾ ಸೊತ್ತು ವಾದಿಗಳ ಸ್ವಾಧೀನದಲ್ಲಿದೆ ಎಂದರೆ ನಮ್ಮ ದಾಖಲೆಗಳ ಪ್ರಕಾರ ಇಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ದಿನಾಂಕ 24-06-1993 ರಂದು ನಿಪಿ 5 ರ ಮೂಲಕ ವಾದಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ನಮ್ಮ ದಾಖಲೆಗಳಲ್ಲಿ ಆ ಬಗ್ಗೆ ಉಲ್ಲೇಖವಿಲ್ಲ ಎಂದು ನುಡಿಯುತ್ತಾರೆ . ಆ ಪ್ರಕಾರವಾಗಿ ರೆವಿನ್ಯೂ ದಾಖಲೆಗಳು ವಾದಿಯ ಹೆಸರಿಗೆ ಆಗಿದೆ ಎಂದರೆ ಆ ಬಗ್ಗೆ ನಮ್ಮ ದಾಖಲೆಗಳಲ್ಲಿ ಯಾವುದೇ ಮಾಹಿತಿ ಇಲ್ಲ. ವಾದಿಗಳ ಸ್ವಾಧೀನವನ್ನು ತೆರವುಗೊಳಿಸಲು ಪಟ್ಟಣ ಪಂಚಾಯತಿಯಿಂದ ರೆಷಲ್ಯೂಷನ್ ಮಾಡಿ ತೆರವು ಗೊಳಿಸಲು ಪ್ರಯತ್ನ ಪಟ್ಟಿರುತ್ತೇವೆ ಎಂದರೆ ಸರಿಯಲ್ಲ.

ದಾವಾ ಸ್ವತ್ತನ್ನು ವಾದಿಗಳು ಸರಕಾರಕ್ಕೆ ಅರ್ಜಿ ಬರೆದುಕೊಂಡ ಪ್ರಕಾರವಾಗಿ ನಿಯಮಾನುಸಾರವಾಗಿ ದಿ 10-01-1992 ರಂದು ರೆಷಲ್ಯೂಷನ್ ಮಾಡಿ ನಿಪಿ 5 ರಂತೆ ಕ್ರಯ ಪತ್ರದ ಮೂಲಕ ವಾದಿಗಳ ಸ್ವಾಧೀನಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ವಾದಿಗಳು ದಾವಾ ಸ್ವತ್ತಿನಲ್ಲಿ ಕಟ್ಟಡ ನಿರ್ಮಾಣ ಮಾಡಲು ಪಟ್ಟಣ ಪಂಚಾಯತಿಯಲ್ಲಿ ಪರವಾನಿಗೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಕಣ್ಣಿನ ಆಸ್ಪತ್ರೆ ನಿರ್ಮಿಸ ಬೇಕಾದಲ್ಲಿ ಕೃಷಿ ಜಮೀನಿನಿಂದ ಕೃಷಿಯೇತರ ಜಮೀನಾಗಿ ಪರಿವರ್ತನೆ ಮಾಡಬೇಕುತ್ತದೆ ಎಂದರೆ ಸರಿ . ಆ ಸಂಬಂಧ ವಾದಿಗಳು ಸಲ್ಲಿಸಿರುವ ಅರ್ಜಿ ಇನ್ನು ಬಾಕಿ ಇದೆ ಎಂದರೆ ಸಾಕ್ಷಿ ಪುರಸಭೆಗೆ ಯಾವುದೇ ಅರ್ಜಿ ನೀಡಿಲ್ಲ ಎನ್ನುವರು .

ನಿಪಿ 11 ನಮ್ಮ ಕಚೇರಿಯಿಂದ ನೀಡಿದ ಹಿಂಭರಹ ಎಂದರೆ ಸರಿ . ದಾವಾ ಸ್ವತ್ತಿನ ದಾಖಲೆಗಳು ನಮ್ಮ ಕಚೇರಿಗೆ ವರ್ಗಾವಣೆಯಾಗಿಲ್ಲ ಎಂದರೆ ಸರಿ . ದಾವಾ ಸ್ವತು

ಪರಿವರ್ತನೆ ಆಗದೆ ಇಲ್ಲದೇ ಇರುವುದರಿಂದ ಎಲ್ಲಾ ದಾಖಲೆಗಳು ತಹಶೀಲ್ದಾರ್ ಕಚೇರಿಯಲ್ಲಿ ಲಭ್ಯವಿದ್ದು ಕೇವಲ ಪರಿವರ್ತನೆಯಾದ ಸ್ವತ್ತುಗಳಿಗೆ ಮಾತ್ರ ನಮ್ಮ ಕಚೇರಿಯಲ್ಲಿ ದಾಖಲೆಗಳು ಲಭ್ಯವಿರುತ್ತದೆ . ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳು ನಮ್ಮ ಕಚೇರಿಯಲ್ಲಿ ಲಭ್ಯವಿಲ್ಲದಿದ್ದರು ಈ ಪ್ರಕರಣದಲ್ಲಿ ನಮ್ಮನ್ನು ಪಕ್ಷಗಾರರನ್ನಾಗಿ ಮಾಡಿದ ನಂತರ ವಿಚಾರಗಳನ್ನು ತಿಳಿದುಕೊಂಡು ಪ್ರತಿವಾದ ಪತ್ರ ತಯಾರಿಸಲು ವಕೀಲರಿಗೆ ಸೂಚನೆ ನೀಡಿರುತ್ತೇವೆ. ವಾದಿಗಳು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿ ಪ್ರತಿವಾದ ಪತ್ರಕ್ಕೆ ಸೂಚನೆಗಳನ್ನು ನೀಡಲಾಗಿರುತ್ತದೆ .

ನನ್ನ ಮುಖ್ಯ ವಿಚಾರಣೆಯು ಪ್ರಮಾಣ ಪತ್ರ ಹಾಗೂ ಪ್ರತಿವಾದ ಪತ್ರದ ಕಂಡಿಕೆ 8 ರಲ್ಲಿ ದಾವಾ ಸ್ವತ್ತಿನ ಮೌಲ್ಯವನ್ನು ಅಂದಾಜಿನ ಮೇಲೆ ತಿಳಿಸಲಾಗಿದೆ . ಯಾವುದೇ ತಿಳುವಳಿಕೆ ಇಲ್ಲದೆ ವಾಸ್ತವಕ್ಕೆ ವಿರುದ್ಧವಾದ ಪ್ರತಿವಾದ ಪತ್ರವನ್ನು ಸಲ್ಲಿಸಿ ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರವನ್ನು ಹಾಜರಪಡಿಸಿದ್ದೇನೆ ಎಂದರೆ ಸರಿಯಲ್ಲ. ಇಂದಿಗೂ ಸಹ ವಾದಿಗಳೇ ದಾವಾ ಸ್ವತ್ತಿನ ಸ್ವಾಧೀನದಲ್ಲೇ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಗಳನ್ನು ದಾವಾ ಸ್ವತ್ತಿನಿಂದ ಅಕ್ರಮವಾಗಿ ತೆರವು ಗೊಳಿಸಲು ನಾವು ಮತ್ತು ಇತರೇ ಪ್ರತಿವಾದಿಗಳು ಪ್ರಯತ್ನ ಪಟ್ಟಿದ್ದೇವೆ ಎಂದರೆ ಸರಿಯಲ್ಲ. ದಾವಾ ದಾಖಲಾಗುವ ಪೂರ್ವದಲ್ಲಿಯು ಮತ್ತು ನಂತರದಲ್ಲಿಯೂ ನಿರಂತರವಾಗಿ ವಾದಿಯಿಂದ ದಾವಾ ಸ್ವತ್ತನ್ನು ಕಸಿಯಲು ಪ್ರಯತ್ನಿಸಿದ್ದೇವೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರ ದ ನ್ಯಾ ದಂ, ಕುಶಾಲನಗರ

ಒ ಎಸ್ ನಂ. 32/21.
DW-1

ಒ ಎಸ್ ನಂ. 32/21.
DW-1